ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನನ್ನ ತಾಲ್ಲೂಕಿನಲ್ಲಿ 24 ಮನೆಗಳಿಗೆ ಪರಿಹಾರ ಕೊಟ್ಟಿದ್ದಾರೆ. ಉಳಿದ 7 ವಿಧಾನ ಸಭಾಕ್ಷೇತ್ರಗಳಲ್ಲಿ ಸೇರಿ ಕೇವಲ 8 ಮನೆಗಳಿಗೆ ಪರಿಹಾರವನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ಕಂದಾಯ ಇಲಾಖೆ ಬಹಳ ದೊಡ್ಡ ಇಲಾಖೆ. ಅವರು ಅನೇಕ ಕೆಲಸಗಳಲ್ಲಿ ಇರುವುದರಿಂದ ಈ ಬಗ್ಗೆ ಪೂರ್ತಿ ಗಮನ ಕೊಡುವುದಕ್ಕಾಗುವುದಿಲ್ಲ. ಫಿಷರೀ ಡಿಪಾರ್ಟ್‌ಮೆಂಟ್ ಚಿಕ್ಕದಾಗಿರುವುದರಿಂದ ಅವರು ಈ ಬಗ್ಗೆ ಸ್ವತಃ ಆಸಕ್ತಿ ವಹಿಸಿ ನೊಂದವರ ಪಟ್ಟಿಯನ್ನು ಮಾಡುವ ಜವಾಬ್ದಾರಿ ತೆಗೆದುಕೊಂಡರೆ ಸಮರ್ಪಕವಾದ ಪಟ್ಟಿ ತಯಾರು ಮಾಡುವುದಕ್ಕೆ ಸಾಧ್ಯವಾಗುತ್ತದೆ.

## ರಾಜ್ಯದಲ್ಲಿನ ಪ್ರತಿಯೊಂದು ವಿಧಾನ ಸಭಾಕ್ಷೇತ್ರಕ್ಕೆ ವಿತರಿಸಿದ ಹಣ

315 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಲೋಕೋಪಯೋಗಿ ಇಲಾಖೆಯಿಂದ ಪ್ರತಿ ವಿಧಾನ ಸಭಾಕ್ಷೇತ್ರಕ್ಕೆ ಈ ಸರ್ಕಾರ ಬಂದ ನಂತರ ಮೀಸಲಿಟ್ಟ ಹಣವೆಷ್ಟು?*

ಆ) *ಇದುವರೆಗೆ ಆಗಿರುವ ಸಾಧನೆ ಏನು; ಜಿಲ್ಲಾವಾರು ವರದಿ ನೀಡುವುದು?*

ಇ) *ಪ್ರತಿ ವಿಧಾನ ಸಭಾಕ್ಷೇತ್ರದ ಗುರಿ 1997-98ನೇ ಸಾಲಿಗೆ ಎಷ್ಟು ನಿಗಧಿಪಡಿಸಲಾಗಿದೆ?*

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಮೀಸಲಿಟ್ಟ ಹಣ 30.00 ಲಕ್ಷ ರೂ. ಗಳು.

ಆ) ಸಾಧನೆ

| 1995-96 | 1996-97 |
|---|---|
| | (ಲಕ್ಷ ರೂ.ಗಳಲ್ಲಿ) |
| 8973.76 | 8574.83 |

ಜಿಲ್ಲಾವಾರು ವಿವರ ಅನುಬಂಧ -1 ರಲ್ಲಿ ನೀಡಿದೆ.

ಇ) ಅನುಬಂಧ -2 ರಲ್ಲಿ ನೀಡಿದೆ.

## ಅನುಬಂಧ - 1

| | | ಸಾಧನೆ | |
|---|---|---|---|
| | | 1995-96 | 1996-97 |
| | | (ಲಕ್ಷ ರೂ.ಗಳಲ್ಲಿ) | |
| 1. | ಮೈಸೂರು ಜಿಲ್ಲೆ | 818.93 | 843.09 |
| 2. | ಮಂಡ್ಯ ಜಿಲ್ಲೆ | 648.35 | 572.12 |
| 3. | ಬೆಂಗಳೂರು ಜಿಲ್ಲೆ | 892.31 | 635.58 |
| 4. | ತುಮಕೂರು ಜಿಲ್ಲೆ | 737.78 | 601.75 |
| 5. | ಕೋಲಾರ ಜಿಲ್ಲೆ | 616.33 | 586.11 |
| 6. | ಶಿವಮೊಗ್ಗ ಜಿಲ್ಲೆ | 945.57 | 896.80 |
| 7. | ಚಿತ್ರದುರ್ಗ ಜಿಲ್ಲೆ | 900.20 | 815.20 |
| 8. | ಹಾಸನ ಜಿಲ್ಲೆ | 835.46 | 533.73 |
| 9. | ಚಿಕ್ಕಮಗಳೂರು ಜಿಲ್ಲೆ | 381.12 | 405.04 |
| 10. | ದಕ್ಷಿಣ ಕನ್ನಡ ಜಿಲ್ಲೆ | 498.98 | 746.38 |
| 11. | ಕೊಡಗು ಜಿಲ್ಲೆ | 418.48 | 340.79 |
| | ಒಟ್ಟು | **7893.41** | **6976.59** |
| 12. | ಧಾರವಾಡ | 226.29 | 301.27 |
| 13. | ಕಾರವಾರ | 28.18 | 102.32 |
| 14. | ಬೆಳಗಾಂ | 246.98 | 286.03 |
| 15 | ಬಿಜಾಪುರ | 140.35 | 234.82 |
| 16. | ಗುಲ್ಬರ್ಗಾ | 121.38 | 186.31 |
| 17. | ಬೀದರ್ | 79.49 | 73.52 |
| 18. | ಬಳ್ಳಾರಿ | 128.57 | 165.86 |
| 19. | ರಾಯಚೂರು | 89.28 | 230.11 |
| | ಉತ್ತರ ವಲಯ | 1080.46 | 1598.24 |
| | ದಕ್ಷಿಣ ವಲಯ | 7893.41 | 6976.59 |
| | ಒಟ್ಟು | **8973.87** | **8574.83** |

## ಅನುಬಂಧ-2

(ದಕ್ಷಿಣ ವಲಯ) (ಲಕ್ಷ ರೂ.ಗಳಲ್ಲಿ)

| ಕ್ರ. ಸಂ. | ವಿಧಾನಸಭಾ ಕ್ಷೇತ್ರ | 1997-98ನೇ ಸಾಲಿಗೆ ನಿಗಧಿಗೊಳಿಸಲಾದ ಹಣ |
|---|---|---|
| (1) | **ಮೈಸೂರು ಜಿಲ್ಲೆ :** | |
| 1. | ಕೃಷ್ಣ ರಾಜ | 2.91 |
| 2. | ಚಾಮರಾಜ | 7.21 |
| 3. | ನರಸಿಂಹರಾಜ | 84.59 |
| 4. | ಚಾಮುಂಡೇಶ್ವರಿ | 164.37 |
| 5. | ಬನ್ನೂರು | 451.79 |
| 6. | ಟಿ. ನರಸೀಪುರ | 27.20 |
| 7. | ಹುಣಸೂರು | 110.48 |
| 8. | ನಂಜನಗೂಡು | 72.11 |
| 9. | ಸಂತೇಮರಳ್ಳಿ | 64.07 |
| 10. | ಪಿರಿಯಾಪಟ್ಟಣ | 102.84 |
| 11. | ಹೆಚ್.ಡಿ. ಕೋಟೆ | 130.27 |
| 12. | ಕೆ.ಆರ್. ನಗರ | 41.31 |
| 13. | ಚಾಮರಾಜನಗರ | 145.40 |
| 14. | ಗುಂಡ್ಲುಪೇಟೆ | 54.15 |
| 15. | ಕೊಳ್ಳೇಗಾಲ | 145.37 |
| 16. | ಹನೂರು | 48.00 |
| | | **1652.07** |
| (2) | **ಮಂಡ್ಯ ಜಿಲ್ಲೆ** | |
| 17. | ಮಂಡ್ಯ | 84.51 |
| 18. | ಕೆರೆಗೋಡು | 132.98 |
| 19. | ಮದ್ದೂರು | 125.23 |

| ಕ್ರ. ಸಂ. | ವಿಧಾನಸಭಾ ಕ್ಷೇತ್ರ | 1997-98ನೇ ಸಾಲಿಗೆ ನಿಗಧಿಗೊಳಿಸಲಾದ ಹಣ |
|---|---|---|
| 20. | ಮಳವಳ್ಳಿ | 150.30 |
| 21. | ಕಿರುಗಾವಲು | 47.73 |
| 22. | ನಾಗಮಂಗಲ | 163.85 |
| 23. | ಕೆ.ಆರ್. ಪೇಟೆ | 160.52 |
| 24. | ಶ್ರೀರಂಗಪಟ್ಟಣ | 110.70 |
| 25. | ಪಾಂಡವಪುರ | 205.24 |
| | | **1181.06** |
| **(3)** | **ಬೆಂಗಳೂರು ಜಿಲ್ಲೆ** | |
| 26. | ಉತ್ತರಹಳ್ಳಿ | 32.38 |
| 27. | ವರ್ತೂರು | 35.36 |
| 28. | ಯಲಹಂಕ | 28.90 |
| 29. | ಹೊಸಕೋಟೆ | 20.00 |
| 30. | ರಾಮನಗರ | 31.57 |
| 31. | ಆನೇಕಲ್ | 242.07 |
| 32. | ದೇವನಹಳ್ಳಿ | 42.48 |
| 33. | ದೊಡ್ಡಬಳ್ಳಾಪುರ | 15.80 |
| 34. | ನೆಲಮಂಗಲ | 26.70 |
| 35. | ಮಾಗಡಿ | 39.00 |
| 36. | ಕೊರಟಗೆರೆ | 9.00 |
| 37. | ಸಾತನೂರು | 1.10 |
| 38. | ಕನಕಪುರ | 43.47 |
| 39. | ಚನ್ನಪಟ್ಟಣ | 41.45 |
| | | **609.28** |

| ಕ್ರ. ಸಂ. | ವಿಧಾನಸಭಾ ಕ್ಷೇತ್ರ | 1997-98ನೇ ಸಾಲಿಗೆ ನಿಗಧಿಗೊಳಿಸಲಾದ ಹಣ |
|---|---|---|
| **4.** | **ತುಮಕೂರು ಜಿಲ್ಲೆ** | |
| 40. | ತುಮಕೂರು | 75.14 |
| 41. | ಗುಬ್ಬಿ | 45.74 |
| 42. | ತಿಪಟೂರು | 50.91 |
| 43. | ಚಿಕ್ಕನಾಯಕನಹಳ್ಳಿ | 55.00 |
| 44. | ಕಳ್ಳಂಬೆಳ್ಳ | 52.00 |
| 45. | ಕುಣಿಗಲ್ | 35.86 |
| 46. | ಶಿರಾ | 55.75 |
| 47. | ಮಧುಗಿರಿ | 45.04 |
| 48. | ಪಾವಗಡ | 50.03 |
| 49. | ಹುಲಿಯೂರುದುರ್ಗ | 45.00 |
| 50. | ಬೆಳ್ಳಾವಿ | 42.00 |
| 51. | ತುರುವೇಕೆರೆ | 42.36 |
| 52. | ಕೊರಟಗೆರೆ | 40.00 |
| | | **634.83** |

ವಿ.ಸೂ : ಕೊರಟಗೆರೆ ಕ್ಷೇತ್ರವು ಬೆಂಗಳೂರು ಹಾಗೂ ತುಮಕೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವುದರಿಂದ 2 ಜಿಲ್ಲೆಗಳಲ್ಲೂ ಗಣನೆಗೆ ತೆಗೆದುಕೊಳ್ಳಲಾಗಿದೆ.

| | | |
|---|---|---|
| **5.** | **ಕೋಲಾರ ಜಿಲ್ಲೆ** | |
| 53. | ಕೋಲಾರ | |
| 54. | ಮೇಮಗಲ್ | |
| 55. | ಬೇತಮಂಗಲ | |
| 56. | ಕೆ.ಜಿ.ಎಫ್ | |
| 57. | ಮಾಲೂರು | |
| 57. | ಚಿಕ್ಕಬಳ್ಳಾಪುರ | |
| 58. | ಶಿಡ್ಲಘಟ್ಟ | |
| 59. | ಚಿಂತಾಮಣಿ | |

| ಕ್ರ. ಸಂ. | ವಿಧಾನಸಭಾ ಕ್ಷೇತ್ರ | 1997-98ನೇ ಸಾಲಿಗೆ ನಿಗಧಿಗೊಳಿಸಲಾದ ಹಣ |
|---|---|---|
| 60. | ಬಾಗೇಪಲ್ಲಿ | 55.29 |
| 61. | ಗೌರಿಬಿದನೂರು | 144.98 |
| 62. | ಶ್ರೀನಿವಾಸಪುರ | 49.83 |
| 63. | ಮುಳಬಾಗಿಲು | 47.69 |
| | | **625.58** |
| **(6)** | **ಶಿವಮೊಗ್ಗ ಜಿಲ್ಲೆ** | |
| 65. | ಶಿವಮೊಗ್ಗ | 65.00 |
| 66. | ಹೊನ್ನಾಳಿ | 115.40 |
| 67. | ಹೊಳೆಹೊನ್ನಾರು | 52.00 |
| 68. | ಭದ್ರಾವತಿ | 85.00 |
| 69. | ಚನ್ನಗಿರಿ | 87.00 |
| 70. | ಸಾಗರ | 98.30 |
| 71. | ಹೊಸನಗರ | 94.80 |
| 72. | ಶಿಕಾರಿಪುರ | 97.50 |
| 73. | ಸೊರಬ | 76.50 |
| 74. | ತೀರ್ಥಹಳ್ಳಿ | 78.00 |
| | | **881.70** |
| **7.** | **ಚಿತ್ರದುರ್ಗ ಜಿಲ್ಲೆ** | |
| 75. | ಚಿತ್ರದುರ್ಗ | 110.30 |
| 76. | ಭರಮಸಾಗರ | 50.10 |
| 77. | ಜಗಳೂರು | 52.82 |
| 78. | ಹಿರಿಯೂರು | 126.41 |
| 79. | ಚಳ್ಳಕೆರೆ | 184.92 |
| 80. | ಮೊಳಕಾಲ್ಮೂರು | 54.36 |

| | | |
|---|---|---|
| 80. | ಜಗಳೂರು | 52.82 |

| ಕ್ರ. ಸಂ. | ವಿಧಾನಸಭಾ ಕ್ಷೇತ್ರ | 1997-98ನೇ ಸಾಲಿಗೆ ನಿಗಧಿಗೊಳಿಸಲಾದ ಹಣ |
|---|---|---|
| 81. | ದಾವಣಗೆರೆ | 71.95 |
| 82. | ಮಾಯಕೊಂಡ | 179.40 |
| 83. | ಹರಿಹರ | 186.00 |
| 84. | ಹೊಳಲ್ಕೆರೆ | 127.31 |
| 85. | ಹೊಸದುರ್ಗ | 264.24 |
| | | **1406.81** |
| **8.** | **ಹಾಸನ ಜಿಲ್ಲೆ** | |
| 86. | ಶ್ರವಣಬೆಳಗೊಳ | 74.29 |
| 87. | ಹೊಳೆನರಸೀಪುರ | 65.60 |
| 88. | ಬೇಲೂರು | 58.95 |
| 89. | ಹಾಸನ | 149.45 |
| 90. | ಗಂಡಸಿ | 55.35 |
| 91. | ಸಕಲೇಶಪುರ-ಆಲೂರು | 56.60 |
| 92. | ಅರಕಲಗೂಡು | 65.74 |
| 93. | ಅರಸೀಕೆರೆ | 55.14 |
| | | **581.12** |
| **9.** | **ಚಿಕ್ಕಮಗಳೂರು ಜಿಲ್ಲೆ** | |
| 94. | ಶೃಂಗೇರಿ | 137.30 |
| 95. | ಮೂಡಗೆರೆ | 70.89 |
| 96. | ಕಡೂರು | 39.77 |
| 97. | ಚಿಕ್ಕಮಗಳೂರು | 83.53 |
| 98. | ತರೀಕೆರೆ | 78.76 |
| 99. | ಬೀರೂರು | 34.02 |

| | | 444.27 |
|---|---|---|
| ಕ್ರ. ಸಂ. | ವಿಧಾನಸಭಾ ಕ್ಷೇತ್ರ | 1997-98ನೇ ಸಾಲಿಗೆ ನಿಗಧಿಗೊಳಿಸಲಾದ ಹಣ |
| **10.** | **ದಕ್ಷಿಣ ಕನ್ನಡ ಜಿಲ್ಲೆ :** | |
| 100. | ಮಂಗಳೂರು | 87.35 |
| 101. | ಉಳ್ಳಾಲ | 10.78 |
| 102. | ವಿಟ್ಲ | 7.30 |
| 103. | ಬಂಟ್ವಾಳ | 19.40 |
| 104. | ಬೆಳ್ತಂಗಡಿ | 13.98 |
| 105. | ಉಡುಪಿ | 339.28 |
| 106. | ಬೈಂದೂರು | 13.00 |
| 107. | ಕುಂದಾಪುರ | 26.10 |
| 108. | ಸುರತ್ಕಲ್ | 43.40 |
| 109. | ಪುತ್ತೂರು | 37.40 |
| 110. | ಸುಳ್ಯ | 22.18 |
| 111. | ಬ್ರಹ್ಮಾವರ | 75.80 |
| 112. | ಕಾಪು | 88.94 |
| 113. | ಮೂಡಬಿದ್ರಿ - ಮುಲ್ಕಿ | 20.30 |
| 114. | ಕಾರ್ಕಳ | 27.32 |
| | | **832.53** |
| **11.** | **ಕೊಡಗೂ ಜಿಲ್ಲೆ :** | |
| 115. | ಮಡಿಕೇರಿ | 109.96 |
| 116. | ವಿರಾಜಪೇಟೆ | 73.47 |
| 117. | ಸೋಮವಾರಪೇಟೆ | 87.46 |
| | | **270.89** |

ಉತ್ತರ ವಲಯ

| ಕ್ರ. ಸಂ. | ವಿಧಾನಸಭಾ ಕ್ಷೇತ್ರ ಮತ | 1997-98ನೇ ಸಾಲಿಗೆ ಅನುದಾನ |
|---|---|---|
| | **ಧಾರವಾಡ ವಿಭಾಗ** | (ಲಕ್ಷ ರೂ.ಗಳಲ್ಲಿ) |
| 1. | ಧಾರವಾಡ ಶಹರ | 16.80 |
| 2. | ಧಾರವಾಡ ಗ್ರಾಮೀಣ | 8.50 |
| 3. | ಹುಬ್ಬಳ್ಳಿ ನಗರ | 14.50 |
| 4. | ಹುಬ್ಬಳ್ಳಿ ಗ್ರಾಮೀಣ | 13.38 |
| 5. | ಕುಂದಗೋಳ | 12.15 |
| 6. | ಕಲಘಟಗಿ | 13.45 |
| 7. | ಹಾವೇರಿ | 10.37 |
| 8. | ಬ್ಯಾಡಗಿ | 15.80 |
| 9. | ರಾಣೆಬೆನ್ನೂರ | 7.00 |
| 10. | ಹಿರೇಕೆರೂರ | 7.45 |
| 11. | ಹಾನಗಲ್ | 11.50 |
| 12. | ಶಿಗ್ಗಾಂವ್ | 11.90 |
| | ಒಟ್ಟು | **142.00** |
| **ಗದಗ್ ವಿಭಾಗ** | | |
| 1. | ಗದಗ್ | 4.33 |
| 2. | ನವಲಗುಂದ | 3.74 |
| 3. | ರೋಣ | 5.43 |
| 4. | ನರಗುಂದ | 10.82 |
| 5. | ಮುಂಡರಗಿ | 6.88 |
| 6. | ಶಿರಹಟ್ಟಿ | 7.80 |
| | | **39.00** |

| ಕ್ರ. ಸಂ. | ವಿಧಾನಸಭಾ ಕ್ಷೇತ್ರ | 1997-98ನೇ ಸಾಲಿಗೆ ಅನುದಾನ |
|---|---|---|
| | **ಕಾರವಾರ ವಿಭಾಗ** | |
| 1. | ಕಾರವಾರ | 14.58 |
| 2. | ಅಂಕೋಲಾ | 14.21 |
| 3. | ಕುಮಟಾ | 17.73 |
| 4. | ಭಟ್ಕಳ | 14.25 |
| 5. | ಶಿರಸಿ-ಸಿದ್ದಾಪೂರ | 98.23 |
| 6. | ಹಳಿಯಾಳ | 20.00 |
| | **ಗುಲ್ಬರ್ಗಾ ವಿಭಾಗ** | |
| 1. | ಅಫಜಲಪೂರ | 8.91 |
| 2. | ಅಳಂದ | 16.21 |
| 3. | ಗುಲ್ಬರ್ಗಾ | 13.77 |
| 4. | ಕಮಲಾಪುರ | 12.96 |
| 5. | ಶಹಬಾದ್ | 13.77 |
| 6. | ಚಿತ್ತಾಪುರ | 11.35 |
| 7. | ಚಿಂಚೋಳಿ | 18.04 |
| | | **95.00** |
| | **ಬೆಳಗಾಂ ವಿಭಾಗ** | |
| 1. | ಬೆಳಗಾಂ | |
| 2. | ಉಡಗಾವ | |
| 3. | ಬಾಗೇವಾಡಿ | |
| 4. | ಖಾನಾಪೂರ | 0.58 |
| 5. | ಬೈಲಹೊಂಗಲ | 7.35 |
| 6. | ಕಿತ್ತೂರು | 8.44 |
| 7. | ರಾಮದುರ್ಗ | 8.40 |

| ಕ್ರ. ಸಂ. | ವಿಧಾನಸಭಾ ಕ್ಷೇತ್ರ | 1997-98ನೇ ಸಾಲಿಗೆ ಅನುದಾನ |
|---|---|---|
| 8. | ಸವದತ್ತಿ | 3.65 |
| 9. | ಹುಕ್ಕೇರಿ | 8.60 |
| 10. | ಸಂಕೇಶ್ವರ | 7.80 |
| 11. | ಅರಭಾವಿ | 8.00 |
| 12. | ಗೋಕಾಕ್ | 6.50 |
| 13. | ಚಿಕ್ಕೋಡಿ | 9.40 |
| 14. | ಸದಲಗಾ | 6.00 |
| 15. | ನಿಪ್ಪಾಣಿ | 10.10 |
| 16. | ರಾಯಭಾಗ | 7.60 |
| 17. | ಅಥಣಿ | 8.65 |
| 18. | ಕಾಗೆವಾಡ | 8.10 |
| | **ಒಟ್ಟು** | **145.00** |
| | **ಬಿಜಾಪುರ ಜಿಲ್ಲೆ** | |
| 1. | ಬಿಜಾಪುರ | 8.90 |
| 2. | ತ್ರಿಕೋಟಾ | 14.30 |
| 3. | ಇಂಡಿ | 13.60 |
| 4. | ಬಳ್ಳೊಳ್ಳಿ | 11.35 |
| 5. | ಸಿಂಧಗಿ | 13.88 |
| 6. | ಬಸವನ ಬಾಗೇವಾಡಿ | 10.17 |
| 7. | ಹೂವಿನ ಹಿಪ್ಪರಗಿ | 11.28 |
| 8. | ಮುದ್ದೇಬಿಹಾಳ | 13.77 |
| 9. | ಜಮಖಂಡಿ | 11.35 |
| 10. | ಮುಧೋಳ | 7.30 |
| 11. | ಬೀಳಗಿ | 14.00 |
| 12. | ಹುನಗುಂದ | 6.95 |

| ಕ್ರ. ಸಂ. | ವಿಧಾನಸಭಾ ಕ್ಷೇತ್ರ | 1997-98ನೇ ಸಾಲಿಗೆ ಅನುದಾನ |
|---|---|---|
| 13. | ಗುಳೇದಗುಡ್ಡ | 10.83 |
| 14. | ಬಾದಾಮಿ | 10.00 |
| 15. | ಬಾಗಲಕೋಟೆ | 15.48 |
| | ಒಟ್ಟು | **173.00** |
| | **ಯಾದಗೀರ್ ವಿಭಾಗ** | |
| 1. | ಯಾದಗೀರ್ | 9.48 |
| 2. | ಗುರುಮಿಟಕಲ್ | 14.68 |
| 3. | ಶಹಾಪುರ | 7.59 |
| 4. | ಶೋರಾಪುರ | 11.20 |
| 5. | ಜೇವರ್ಗಿ | 6.81 |
| 6. | ಸೇಡಂ | 8.24 |
| | ಒಟ್ಟು | **58.00** |
| | **ಬಳ್ಳಾರಿ ವಿಭಾಗ** | |
| 1. | ಬಳ್ಳಾರಿ | 10.00 |
| 2. | ಕುರಗೋಡ | 12.00 |
| 3. | ಸಿರಗುಪ್ಪಾ | 5.60 |
| 4. | ಹೊಸಪೇಟೆ | 10.00 |
| 5. | ಸಂಡೂರು | 4.40 |
| 6. | ಕೂಡಲಗಿ | 12.80 |
| 7. | ಹರಪನಹಳ್ಳಿ | 10.20 |
| 8. | ಹಡಗಲಿ | 3.00 |
| | ಒಟ್ಟು | **74.00** |
| | **ಬೀದರ್ ವಿಭಾಗ** | |
| 1. | ಬೀದರ್ | 6.54 |

| ಕ್ರ. ಸಂ. | ವಿಧಾನಸಭಾ ಕ್ಷೇತ್ರ | 1997-98ನೇ ಸಾಲಿಗೆ ಅನುದಾನ |
|---|---|---|
| 2. | ಹುಮ್ನಾಬಾದ್ | 15.23 |
| 3. | ಭಾಲ್ಕಿ | 7.80 |
| 4. | ಬಸವ ಕಲ್ಯಾಣ | 11.25 |
| 5. | ಹುಲಸೂರು | 7.90 |
| 6. | ಔರಾದ್ | 6.08 |
| | ಒಟ್ಟು | **52.00** |
| | **ರಾಯಚೂರು ವಿಭಾಗ** | |
| 1. | ರಾಯಚೂರು | 11.95 |
| 2. | ಕಲಮಲಾ | 6.46 |
| 3. | ಮಾನವಿ | 15.65 |
| 4. | ದೇವದುರ್ಗ | 9.69 |
| 5. | ಲಿಂಗಸೂಗೂರು | 12.12 |
| 6. | ಸಿಂಧನೂರು | 6.31 |
| 7. | ಗಂಗಾವತಿ | 13.25 |
| 8. | ಕನಕಗಿರಿ | 14.30 |
| 9. | ಕೊಪ್ಪಳ | 9.35 |
| 10. | ಕುಷ್ಟಗಿ | 9.56 |
| 11. | ಯಲ್ಬುರ್ಗ | 14.38 |
| | ಒಟ್ಟು | **123.00** |

ಶ್ರೀ ಅರಗ ಜ್ಞಾನೇಂದ್ರ (ಶ್ರೀ ಕೆ.ಎಸ್. ಈಶ್ವರಪ್ಪನವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 1995-96, 1996-97ನೇ ಸಾಲಿನಲ್ಲಿ ಎಷ್ಟೆಷ್ಟು ಸಾಧನೆಯನ್ನು ಮಾಡಲಾಗಿದೆಯೆಂದು ಮಾನ್ಯ ಮಂತ್ರಿಯವರು ತಮ್ಮ ಉತ್ತರದಲ್ಲಿ ಕೊಟ್ಟಿದ್ದಾರೆ. ಈ ಸಾಧನೆಯನ್ನು ಮಾಡಲಿಕ್ಕೆ ಈಗಾಗಲೇ ಬಿಡುಗಡೆ ಮಾಡಿರುವ ಹಣ ಎಷ್ಟು? ಆಮೇಲೆ ಅನುಬಂಧ 2ರಲ್ಲಿ ಕ್ಷೇತ್ರಾವಾರು ಎಷ್ಟೆಷ್ಟು ನಿಗಧಿಪಡಿಸಿದ್ದೇವೆಂದು ಮಾಹಿತಿಯನ್ನು ಕೊಡಲಾಗಿದೆ. ಮಂಡ್ಯ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳಲ್ಲಿ ಒಂದಕ್ಕೆ 132 ಲಕ್ಷ, ಇನ್ನೊಂದಕ್ಕೆ 125 ಲಕ್ಷ, ಇನ್ನೊಂದಕ್ಕೆ 205.24 ಲಕ್ಷ ರೂಪಾಯಿಗಳನ್ನು

ಕೊಟ್ಟಿದ್ದಾರೆ. ಆದರೆ, ಶಿವಮೊಗ್ಗ ವಿಧಾನಸಭಾ ಕ್ಷೇತ್ರಗಳಲ್ಲಿ, 40 ಲಕ್ಷ, 50 ಲಕ್ಷ, 60 ಲಕ್ಷ ಮತ್ತು ತುಮಕೂರು ವಿಧಾನ ಸಭಾ ಕ್ಷೇತ್ರಗಳಲ್ಲಿ 42 ಲಕ್ಷ, 50 ಲಕ್ಷ, 75 ಲಕ್ಷ ಹೀಗೆ ಹಣವನ್ನು ನಿಗದಿ ಮಾಡಿದ್ದಾರೆ. ಮಂಡ್ಯ ಜಿಲ್ಲೆಯ ಶಾಸಕರುಗಳು ಯಾವ ಹಿರಿಯಕ್ಕನ ಮಕ್ಕಳು? ನಾವು ಯಾವ ಕಿರಿಯಕ್ಕನ ಮಕ್ಕಳೆಂದು ನಮಗೆ ಅರ್ಥವಾಗುವುದಿಲ್ಲ. ಮಾನ್ಯ ಲೋಕೋಪಯೋಗಿ ಸಚಿವರು ಎಲ್ಲರನ್ನೂ ಒಂದೇ ರೀತಿ ಭಾವಿಸುತ್ತಾರೆಂದು ನಾವೆಲ್ಲಾ ತಿಳಿದುಕೊಂಡಿದ್ದೇವೆ. ಈ ತಾರತಮ್ಯ ಏಕೆ? ಹಾಗೂ ಹಣ ಬಿಡುಗಡೆ ಮಾಡುವುದರಲ್ಲಿ ವಿಳಂಬ ಏಕೆ? ನಮ್ಮ ಕ್ಷೇತ್ರದಲ್ಲಿ ಕೆಲಸ ಮಾಡಿರುವುದಕ್ಕೆ ಇನ್ನೂ ಹಣ ಬಿಡುಗಡೆ ಮಾಡಿಲ್ಲ.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಸಭಾಧ್ಯಕ್ಷರೆ, 1995-96, 1996-97ನೇ ಸಾಲಿನಲ್ಲಿ ಹಣ ಬಿಡುಗಡೆ ಮಾಡಿರುವ ಬಗ್ಗೆ ವಿವರಗಳನ್ನು ಕೊಡಲಾಗಿದೆ. ಇದರ ಜೊತೆಗೆ ಪ್ರತಿ ವಿಧಾನ ಸಭಾ ಕ್ಷೇತ್ರದ ಕೆಲಸಗಳಿಗೆ ಹೆಚ್ಚುವರಿಯಾಗಿ 30 ಲಕ್ಷ ರೂಪಾಯಿಗಳನ್ನು ಕೊಟ್ಟಿರುವ ಬಗ್ಗೆ ಲೆಕ್ಕಗಳು ಬೇರೆ ಇವೆ. ಅದರಲ್ಲಿ, 1995-96ರಲ್ಲಿ 4 ಕೋಟಿ ಖರ್ಚು ಮಾಡಿದ್ದೇವೆ, 1996-97ರಲ್ಲಿ 36 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 1997-98ರಲ್ಲಿ ಈಗಾಗಲೇ 45 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಇನ್ನೂ 17 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಇನ್ನು ಸನ್ಮಾನ್ಯ ಸದಸ್ಯರು ಏನು ಆತಂಕವನ್ನು ವ್ಯಕ್ತಪಡಿಸಿದ್ದಾರೆಂದರೆ, 1995-96 ಮತ್ತು 1996-97ರಲ್ಲಿ ಕೆಲವು ವಿಧಾನ ಸಭಾ ಕ್ಷೇತ್ರಗಳಲ್ಲಿ ಹೆಚ್ಚು ಖರ್ಚಾಗಿದೆ ಮತ್ತು ಕೆಲವು ವಿಧಾನ ಸಭಾ ಕ್ಷೇತ್ರಗಳಲ್ಲಿ ಕಡಿಮೆ ಖರ್ಚಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಎಲ್ಲಾ ವಿಧಾನ ಸಭಾ ಕ್ಷೇತ್ರಗಳಿಗೆ ಹಣ ಕೊಡುವಾಗ ಇಂತಿಂಥ ಕ್ಷೇತ್ರಕ್ಕೆ ಇಷ್ಟೆ ಹಣ ಕೊಡಬೇಕೆನ್ನುವ ಬಗ್ಗೆ ಗೊತ್ತುಗುರಿಯನ್ನು ನಿಗದಿಪಡಿಸಿರುವುದಿಲ್ಲ. ಆಯಾ ಕ್ಷೇತ್ರದ ಅವಶ್ಯಕತೆಗನುಗುಣವಾಗಿ ರಸ್ತೆಗಳು, ಸೇತುವೆಗಳು ಮತ್ತು ಕಟ್ಟಡಗಳನ್ನು ಕಟ್ಟಲು ಒಟ್ಟು ಆಯವ್ಯಯದಲ್ಲಿ ಒದಗಿಸಲಾಗಿರುವ ಹಣವನ್ನು ಖರ್ಚು ಮಾಡಲಾಗುತ್ತದೆ. ಯಾವ ಕ್ಷೇತ್ರದಲ್ಲಿ ಮಿನಿ ವಿಧಾನ ಸೌಧವನ್ನು ಕಟ್ಟುವ ಕೆಲಸ ತೆಗೆದುಕೊಂಡಿದ್ದಾರೋ ಅಲ್ಲಿ ಸ್ವಲ್ಪಮಟ್ಟಿಗೆ ಹೆಚ್ಚು ಖರ್ಚು ಬರುತ್ತದೆ. ಕೆಲವು ಕ್ಷೇತ್ರಗಳಲ್ಲಿ ಆಸ್ಪತ್ರೆ ಕಟ್ಟಡಗಳನ್ನು ಕಟ್ಟಿದರೆ, ಅಲ್ಲಿ ಹೆಚ್ಚು ಖರ್ಚು ಬರುತ್ತದೆ. ಕೆಲವು ಕ್ಷೇತ್ರಗಳಲ್ಲಿ ಹೈವೇನಲ್ಲಿ ಬರುವ ಸೇತುವೆ ಕೆಲಸ ತೆಗೆದುಕೊಂಡಿದ್ದರೆ ಹೆಚ್ಚು ಖರ್ಚು ಬರುತ್ತದೆ.

(ಈ ಸಂದರ್ಭದಲ್ಲಿ ಉಪ ಪ್ರಶ್ನೆ ಕೇಳಲು ಬಹಳ ಜನ ಮಾನ್ಯ ಸದಸ್ಯರುಗಳು ಕೈ ಎತ್ತಿದ್ದರು)

ಅಧ್ಯಕ್ಷರು : ಶ್ರೀಯುತರಾದ ಜಯರಾಮ ಶೆಟ್ಟರು, ಸದಾನಂದ ಗೌಡರು, ಜಗದೀಶ ಶೆಟ್ಟರ್, ಸಗೀರ್‌ಅಹಮದ್, ವಿರೂಪಾಕ್ಷಪ್ಪ ಎಲ್ಲರೂ ಕುಳಿತುಕೊಳ್ಳಬೇಕು. ಈ ಬಗ್ಗೆ ಉಪ ಪ್ರಶ್ನೆ ಕೇಳಲು ಒಟ್ಟಿಗೆ ನೀವೆಲ್ಲರೂ ಎದ್ದಾಗ ಇದು ಎಂಥಾ ಗಹನವಾದ ವಿಚಾರವೆಂದು ನನಗೆ ಅರ್ಥವಾಗಿದೆ. ಬೇಡಿಕೆಗಳನ್ನು ಸದನದಲ್ಲಿ ಇಟ್ಟಾಗ ಈ ಬಗ್ಗೆ ವಿವರವಾಗಿ ಚರ್ಚೆ ಮಾಡುವುದಕ್ಕೆ ತಮಗೆ ಅವಕಾಶ ಇದೆ. ಅಥವಾ ಈ ವಿಷಯದ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡಬೇಕೆಂದು ಬಯಸುವುದಾದರೆ ಕಾಲವನ್ನು ನಿಗದಿ ಮಾಡೋಣ.

ಶ್ರೀ ವಸಂತ ವಿ. ಸಾಲಿಯಾನ : ಜಿಲ್ಲಾವಾರು ಶಾಸಕರುಗಳನ್ನು ಕರೆದು ಚರ್ಚೆ ಮಾಡಿದರೆ ಒಳ್ಳೆಯದು.

ಅಧ್ಯಕ್ಷರು : ಮಾನ್ಯ ವಸಂತ ಸಾಲಿಯಾನ ಅವರ ಸಲಹೆಯನ್ನು ಒಪ್ಪಲಾಗಿದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ವಿಧಾನ ಸಭಾ ಕ್ಷೇತ್ರದಲ್ಲಿ ನಿಗದಿಯಾದ ಕೆಲಸಗಳನ್ನು ಗುತ್ತಿಗೆದಾರರು ಮಾಡಿದ್ದರೂ ಹಣವನ್ನು ಬಿಡುಗಡೆ ಮಾಡಿರುವುದಿಲ್ಲವಾದ್ದರಿಂದ ಮುಂದಿನ ಕೆಲಸಗಳನ್ನು ಮಾಡಲು ಗುತ್ತಿಗೆದಾರರು ಒಪ್ಪುತ್ತಿಲ್ಲ ಹಾಗೂ ಇದರಿಂದ ವಿಧಾನ ಸಭಾ ಸದಸ್ಯರುಗಳಿಗೆ ಇಕ್ಕಟ್ಟಿನ ಪರಿಸ್ಥಿತಿ ಉಂಟಾಗಿದೆ. ಆದುದರಿಂದ, ಕೆಲಸವಾಗಿರುವುದಕ್ಕೆ ಕೂಡಲೇ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ 30 ಲಕ್ಷ ರೂಪಾಯಿಗಳಂತೆ ಒಟ್ಟು 45 ಕೋಟಿ 52 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ಇನ್ನೂ ಉಳಿದಿರುವ 17 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಗೊತ್ತುಪಡಿಸಿರುವ ಕೆಲಸಗಳನ್ನು ಮಾಡಿಸಲು ಅನುಕೂಲ ಮಾಡಿಕೊಡಲಾಗುತ್ತದೆ.

ಶ್ರೀ ಹೆಚ್. ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ಈ ಲಿಸ್ಟ್‌ನ್ನು ನೋಡಿದ ಮೇಲೆ, ಮಾನ್ಯ ಸದಸ್ಯರುಗಳ ಕಳಕಳಿ ಏನೆಂದು ತಮಗೂ ಅರ್ಥವಾಗಿರಬಹುದು. ಕೆಲವು ತಾಲ್ಲೂಕುಗಳು ಅಭಿವೃದ್ಧಿಯಾಗಿವೆ, ಅವಕ್ಕೆ ಹಣವೇ ಬೇಕಾಗಿಲ್ಲ ಎನ್ನುವ ಲೆಕ್ಕದಲ್ಲಿ ಹೇಳಿದ್ದಾರೆ. ರಾಯಚೂರು, ಬಳ್ಳಾರಿ, ಯಾದಗಿರ್, ಬೀದರ್ ಮತ್ತು ಗದಗ್ ವಿಭಾಗಗಳಿಗೆ ಎರಡು ಸಂಖ್ಯೆಯಷ್ಟು ತಲುಪಿಲ್ಲ ಅಷ್ಟು ಕಡಿಮೆ ಹಣವನ್ನು ಒದಗಿಸಿದ್ದಾರೆ. ಈ ರೀತಿ ಹಣವನ್ನು ಬಿಡುಗಡೆ ಮಾಡುವುದಕ್ಕೆ ಇರುವ ಮಾನದಂಡ ಏನು ? What are criteria to allot money to different Assembly Constituencies?

MR. SPEAKER : You were a Minsiter!

11.00 ಎ.ಎಂ

ಶ್ರೀ ಹೆಚ್.ಎನ್. ನಂಜೇಗೌಡ : ನಾವು ಈ ತರಹ ಮಾಡುತ್ತಾ ಇರಲಿಲ್ಲ.

ಅಧ್ಯಕ್ಷರು : ನೀವು ಆ ತರಹ ಮಾಡಿದ್ದೀರಿ ಎಂದು ನಾನು ಹೇಳಲಿಲ್ಲ. ಈ ತರಹ ಹೇಗೆ ಆಗುತ್ತದೆ ಎಂದು ಬಗ್ಗೆ ನಿಮಗೆ ಐಡಿಯಾ ಇರುತ್ತದೆ ಎಂದು ನಾನು ಹೇಳಿದ್ದುದು.

ಶ್ರೀ ಹೆಚ್.ಎನ್. ನಂಜೇಗೌಡ : ಇಲ್ಲಿ ಅಲಾಟ್‌ಮೆಂಟ್ ಮಾಡುವಾಗ ಒಂದು ಲೆಕ್ಕವೇ ಇಲ್ಲ. ಕೆಲವುಕಡೆಗಳಿಗೆ ಒಂದು ಕೋಟಿ ಕೊಡುತ್ತಾರೆ, ಕೆಲವು ಕಡೆಗಳಲ್ಲಿ 3 ಲಕ್ಷ, ಕೆಲವರಿಗೆ ಒಂದು ಲಕ್ಷ, ಹೀಗೆ ಒಂದು ಲೆಕ್ಕವೇ ಇಲ್ಲ. ಅಂದರೆ ಕೆಲವರನ್ನು ಪಾಳುಬಿಟ್ಟು ಬಿಡುವುದು ಎಂದು ಅರ್ಥವೇ? ರಾಜ್ಯದ ಎಲ್ಲೆಡೆಗಳಲ್ಲಿಯೂ ಸಮತೋಲನವಾಗಿ ಬೆಳೆಯ ಬೇಕಲ್ಲವೆ? ಅಭಿವೃದ್ಧಿ ಕಾರ್ಯಗಳು ಸಮತೋಲನವಾಗಿ ಆಗಬೇಕಲ್ಲ? ಇದಕ್ಕೆ ಮಾನದಂಡ ಏನು ಎಂದು ಹೇಳಬೇಕು?

ಶ್ರೀ ಸಿ.ಎಂ. ಉದಾಸಿ : ಈ ಕೆಲಸಕಾರ್ಯಗಳ ಬಗ್ಗೆ ಮಾನ್ಯ ಸದಸ್ಯರ ಗಮನಕ್ಕೆ ತಂದಿದ್ದೇವೆ.

ಅಧ್ಯಕ್ಷರು : ಮಾನ್ಯ ನಂಜೇಗೌಡರು ಹೇಳಿದ್ದನ್ನು ಕೂಡ ನಾನು ಆಗ ಹೇಳಿದ್ದೆ. We will take up this matter for a detailed discussion. ಇವೊತ್ತು ಅದು ಕಾಕತಾಳೀಯ ಇರಬಹುದು, ಮಾನ್ಯ ಉದಾಸಿಯವರು ಆ ಇಲಾಖೆಯನ್ನು ವಹಿಸಿಕೊಂಡಿರಬಹುದು. ಆದರೆ ಈ ವಿಚಾರದಲ್ಲಿ ಮೊದಲಿನಿಂದಲೂ ಹೀಗೆ ನಡೆದುಕೊಂಡು ಬಂದಿರುವುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರ ಕ್ಷೇತ್ರಕ್ಕೂ ಕೂಡ ಕಡಿಮೆ ಕೊಟ್ಟಿದ್ದಾರೆ.

ಅಧ್ಯಕ್ಷರು : ನೀವಾದರೂ ಸದನದಲ್ಲಿ ನನ್ನ ಪರವಾಗಿ ಮಾತನಾಡಿದ್ದೀರಿ. ಬೇರೆಯವರು ಯಾರೂ ನನ್ನ ಪರವಾಗಿ ಮಾತನಾಡಲಿಲ್ಲ. ನೀವು ನನ್ನ ಪರವಾಗಿ ಇದ್ದೀರಿ , ಆ ವಿಚಾರವನ್ನು ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಸಿ.ಎಂ. ಉದಾಸಿ : ನನ್ನ ಕ್ಷೇತ್ರಕ್ಕೂ ಕೂಡ ಕಡಿಮೆ ಹಣ ಇಟ್ಟಿದ್ದೇವೆ. ಅದು ಬೇರೆ ಪ್ರಶ್ನೆ. ನಾನು ಹೇಳುತ್ತಿರುವುದೇನೆಂದರೆ, ಈ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ ಇದು ಪ್ರತಿಯೊಂದು ವಿಧಾನಸಭಾಕ್ಷೇತ್ರಕ್ಕೂ ಇಷ್ಟು ಮೊತ್ತ ಎಂದು ಸೀಮಿತಗೊಳಿಸಿ ಮಾಡಿದ ವ್ಯವಸ್ಥೆಯಲ್ಲ. ಉದಾಹರಣೆಗೆ ಕೆಲವು ಕಡೆಗಳಲ್ಲಿ ಮಿನಿವಿಧಾನಸೌಧ ಬರಬಹುದು, ಆಸ್ಪತ್ರೆ ಕಟ್ಟಡಗಳು ಬರಬಹುದು, ಸೇತುವೆಗಳು ಬರಬಹುದು ರಸ್ತೆಗಳು ಬರಬಹುದು, ನ್ಯಾಯಾಲಯಗಳ ಕಟ್ಟಡಗಳು ಬರಬಹುದು, ಕಚೇರಿ ಕಟ್ಟಡಗಳು ಬರಬಹುದು, ಹೀಗೆ ದೊಡ್ಡ ಕೆಲಸಗಳು ಬಂದಾಗ ಹೆಚ್ಚು ಹಣ ಒಂದು ಕ್ಷೇತ್ರಕ್ಕೆ ಹೋಗುವುದು ಸಹಜ. ಇದನ್ನು ತಾವುಗಳು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.

## ಕಮಲಾಪುರ ಕ್ಷೇತ್ರದ ರಸ್ತೆಗಳು

305 - ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಕ್ಷೇತ್ರದ ಅಳಂದ, ವಿ.ಕೆ. ಸಲಗರ, ಮಾಂಗಾವೆ, ಚಿಂಚೋಳಿ, ರಸ್ತೆಗಳು ತೀರಾ ಹದಗೆಟ್ಟಿದ್ದು, ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದರೆ ಇದನ್ನು ಸರಿಪಡಿಸಲು ಸರ್ಕಾರವು ಏನು ಕ್ರಮ ಕೈಗೊಂಡಿದೆ?*

ಇ) *ಗುಲ್ಬರ್ಗಾದಿಂದ ಬಸವ ಕಲ್ಯಾಣ ಅಂಬಡಗಾ ಕ್ರಾಸ್‌ನಿಂದ 7 ಕಿ.ಮೀ ಡಾಂಬರೀಕರಣ ಬೆಂಡಿಂಗ್ ಇದ್ದು, ಯಾವಾಗ ಡಾಂಬರೀಕರಣ ಮಾಡಲಾಗುವುದು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ. ಗುಲ್ಬರ್ಗಾ ಜಿಲ್ಲೆಯ ಅಳಂದ ತಾಲ್ಲೂಕಿನಲ್ಲಿ ಹಾದು ಹೋಗುವ ಈ ರಸ್ತೆ ವಾಹನ ಸಂಚಾರಕ್ಕೆ ಯೋಗ್ಯವಾಗಿದೆ.